ಕೆಲಸದ ಹೊತ್ತಿನಲ್ಲೆಲ್ಲಾ ಅವನು ಸುಶ್ರಾವ್ಯವಾಗಿ ಗುನುಗುತ್ತಿದ್ದ ಮಲಯಾಳಂ ಚಿತ್ರಸಂಗೀತ ನನ್ನನ್ನು ಮತ್ತೆ ಮತ್ತೆ ಸೆಳೆದು ಸುತ್ತಿ ಹಿಡಿದಿಡುತ್ತಿತ್ತು. ಭಾಷೆಯ ಸಾಹಿತ್ಯದ ಅರಿವಿಗೆ ಮೀರಿದ ಭಾವದ ಲಯದಲ್ಲಿ ಮೇಳೈಸಿ ಎಳೆಯುತ್ತಿತ್ತು. ಮಕ್ಕಳಿಗೆ ಇಷ್ಟವಾಗುವ ಇನ್ನೂ ಕೆಲವು ಬಾಲಗೀತೆಗಳನ್ನೂ ನನಗಾಗಿ ಹಾಡುತ್ತಿದ್ದ. ಕಾವ್ಯ ಮತ್ತು ಕರ್ತವ್ಯಗಳಲ್ಲಿ ಒಂದೇ ರೀತಿ ಕಾಣುತ್ತಿದ್ದ ಅವನ ತತ್ಪರತೆ ನಮಗೆಲ್ಲ ಅದೇನೊ ಒಂದು ಹಿತ ನೀಡುತ್ತಿತ್ತು. 'ಬದುಕನ್ನು ಇದ್ದುದಿದ್ದಂತೆ ಸಹನೀಯವಾಗಿ ಅನುಭವಿಸಬೇಕಾದರೆ ಕೈಯಲ್ಲೊಂದು ಕಲೆ ಇರಬೇಕು ಮಾಸ್ಟ್ರೆ' ಅಂತಿದ್ದ ಅಪ್ಪನೊಡನೆ. ನನಗೇನೂ ತಿಳೀತಿರಲಿಲ್ಲ. ಒಳ್ಳೆಯ ಮರದಲ್ಲಿ ನನಗಾಗಿ ಒಂದು ಬಾಲಕೃಷ್ಣನ ಗೊಂಬೆಯನ್ನು ಮಾಡಿಕೊಡುವುದಾಗಿ ಆಗಾಗ ಹೇಳಿಕೊಳ್ಳುತ್ತಿದ್ದ. ನೆನಪಿಸಿ ನಾನು ಕೇಳಿದಾಗೆಲ್ಲಾ, 'ಮೋಳೇ, ಇದೊಂದಾಗಲಿ, ಮತ್ತೆ ನಿನ್ನದೇ...' ಅಂತನ್ನುವಾಗ ನಾನು ಸಿಟ್ಟಾಗಿ ಮಾತು ಬಿಟ್ಟು ಕೂತರೂ ಬಹಳ ಹೊತ್ತು ಇಟ್ಟುಕೊಳ್ಳಲಾಗದೆ ಮತ್ತೆ ನಮ್ಮ ನಡುವೆ ಮಾತು ನುಸುಳುತ್ತಿತ್ತು.

ನನಗೆ ಹತ್ತು ವರ್ಷ ತುಂಬಿದ ದಿನ–ಹುಟ್ಟುಹಬ್ಬದ ಆಚರಣೆಯೇನೂ ಆಗ ಇಲ್ಲದಿದ್ದರೂ ಬೆಳಗು ಮುಂಚೆ ಅಪ್ಪ ತಮ್ಮ ಸೈಕಲ್ ಮೇಲೆ ಕೂರಿಸಿ ದೇವಸ್ಥಾನಕ್ಕೆ ಕರೆದೊಯ್ಯುತ್ತಿದ್ದರು. ಪ್ರಸಾದ ಹಿಡಿದು ಬಂದು ಮನೆಯ ಗೇಟು ತೆರೆದಾಗ ವೇಲು ಆಚಾರಿ ಒಮ್ಮೆಗೇ ಕಾಣಿಸಿಕೊಂಡ. ಕೈಯಲ್ಲಿ ಹಿಡಿದ ಬಿಳಿ ತೋರ್ತಿನೊಳಗೆ ಅಗೋಚರವಾಗಿದ್ದ ಅದೇನೊ ಒಂದು ವಸ್ತುವನ್ನು ನನ್ನೆಡೆಗೆ ಚಾಚಿ ಹಿಡಿದು, ಎಂದಿಗಿಂತ ಚಂದವಾಗಿ ಮುಗುಳ್ನಕ್ಕ. ಆತುರವಾಗಿ ಬಿಡಿಸಿ ನೋಡಿದೆ. ಕಪ್ಪುಮರದಲ್ಲಿ ಮಿರಿಮಿರಿ ಮಿಂಚುತ್ತಿದ್ದ ಪುಟ್ಟ ಮೂರ್ತಿ ಮನೋಹರವಾಗಿತ್ತು. ಕೃಷ್ಣನೇ! ಒಂದು ಕ್ಷಣ ನನ್ನ ಎದೆಬಡಿತವೇ ನಿಂತುಹೋದ ಅನಿಸಿಕೆ. ಇದ್ಯಾವಾಗ ಮಾಡಿಬಿಟ್ಟ? ನಾನು ಶಾಲೆಯಲ್ಲಿರುತ್ತಿದ್ದ ವೇಳೆಯಲ್ಲೆ? ಮಲಗಿ ನಿದ್ದೆ ಹೋದ ಮೇಲೆಯೇ? ಗೊತ್ತಿಲ್ಲ. ಅಂತೂ ಮುಂದಿನ ದಿನಗಳಲ್ಲಿ ಆ ಮುದ್ದುಕೃಷ್ಣ ನನ್ನ ನಲ್ಮೆಯ ಸಂಗಾತಿಯಾದ. ಮನಮೆಚ್ಚಿದ ಜತೆಗಾರನಾದ. ಕೆಲಸ ಮುಗಿಸಿ ವೇಲು ತನ್ನೂರಿಗೆ ಹೋದ ಮೇಲೂ ನನ್ನೊಡನೆ ಉಳಿದು ಸಂತೈಸಿದ. ಅಕ್ಕ–ಪಕ್ಕದ ಮನೆಗಳ ನನ್ನ ಮಿತ್ರವೃಂದವೆಲ್ಲಾ ಮನೆಗೆ ಬಂದು ನೋಡಿ ನನ್ನ ಈ ಸೌಭಾಗ್ಯಕ್ಕಾಗಿ ಒಂದಷ್ಟು ಕರುಬಿ, ಮತ್ತೊಂದಿಷ್ಟು ಹೊಗಳಿ ಹೋದಾಗ ನನ್ನ ಹೆಮ್ಮೆಯ ಮುಖಚರ್ಯೆಗೆ ವೇಲು ಕೆನ್ನೆ ಚಿವುಟುತ್ತಿದ್ದ. ಅವನಿಲ್ಲದಾಗ ನಮ್ಮ ಕೊಟ್ಟಿಗೆ ಅಂಗಳಗಳು ಹೊದ್ದ ಖಾಲಿತನವನ್ನು 'ಮುಂದಿನ ವರ್ಷ ಮತ್ತೆ ಬರ್ತೇನೆ' ಅಂದಿದ್ದ ಅವನ ಮಾತು ಒಂದಿಷ್ಟು ಮರೆಸುತ್ತಿತ್ತು.

ಹಿತ್ತಿಲ ಹಲಸಿನ ಮರವೊಂದು ಹಳೆಯದಾಗಿತ್ತು. ಒಂದು ದಿನ ಕೈಯಲ್ಲಿ ಹಗ್ಗ, ಕತ್ತಿ, ಕೊಡಲಿ, ಗರಗಸಗಳೊಂದಿಗೆ ನಾಲ್ಕಾರು ಆಳುಗಳು ಅದೇನೊ ಲೆಕ್ಕ ಹಾಕುತ್ತ ಅದರ ಸುತ್ತ ನಿಂತಿದ್ದರು. ಸಾಯಂಕಾಲ ನಾನು ಶಾಲೆಯಿಂದ ಬಂದಾಗ ಮರ ಕಡಿದು ಉರುಳಿಸಿಕೊಂಡು ಹಲವಾರು ತುಂಡುಗಳಾಗಿ ಅಲ್ಲಲ್ಲಿ ಬಿದ್ದಿತ್ತು. 'ಯಾಕೆ ಅಪ್ಪ, ಮರ ಕಡಿದುದ್ಯಾಕೆ?' ಅಪ್ಪನ ಕೈಹಿಡಿದು ಜಗ್ಗುತ್ತ ಮತ್ತೆ ಮತ್ತೆ ಕೇಳಿದೆ. 'ಮುಂದಿನ ವರ್ಷ ವೇಲು ಮತ್ತೆ ಬರ್ತಾನಲ್ಲ, ಆಗ ನಾನು–ನೀನು ಇಬ್ಬರೂ ಮಲಗೋ ಹಾಗೆ ದೊಡ್ಡ ಮಂಚ ಮಾಡಿಸೋಣ' ಅಂದರು. 'ಈಗಲೇ ಬರಲಿ ಆಚಾರಿ. ನೀನು ಪತ್ರ ಬರಿ.' ಅಂತ ಪ್ರತಿದಿನ ಒತ್ತಾಯಿಸುತ್ತಿದ್ದೆ. 'ಮರ ಚೆನ್ನಾಗಿ ಒಣಗಬೇಕು ಮೋಳೇ, ಮತ್ತೆ ಮಂಚ ಮಾಡಬೇಕಷ್ಟೆ' ಎಂದು ಅಜ್ಜಿ ವಿವರಿಸಿ ಹೇಳಿದರು. ವೇಲಾಯುಧ ಮೊದಲ ಬಾರಿ ಕಂಡಾಗ ಕರೆದ 'ಮೋಳೇ' ಅನ್ನುವ ಸಂಬೋಧನೆ ನನ್ನ ಅರಿವಿಗೇ ಬಾರದ ನೆಚ್ಚಿಕೆಯಲ್ಲಿ ನನಗೆ ಹಚ್ಚಿ ನಿಂತಿತ್ತು! ಮನೆಮಂದಿಗೂ ಅದೇ ರೂಢಿಯಾಗಿ ಅಕ್ಕ–ಪಕ್ಕವೂ ಹಬ್ಬಿತು!

ಒಪ್ಪಿದಂತೆ ವರ್ಷವಾಗುವುದರೊಳಗೆ ವೇಲಾಯುಧ ಮತ್ತೆ ಬಂದು

